## ಮನಸೆಳೆದ ನಾಂಗ್ ನೂಚ್

‘ಮನಮೋಹಕ ನಾಂಗ್ ನೂಚ್ ಉದ್ಯಾನ’ (ಸೆ. 18, ಕೆ.ಟಿ. ಜಯಶ್ರೀ) ಪ್ರವಾಸ ಲೇಖನ ಕಣ್ಮನ ಸೆಳೆಯಿತು. ಸುಮಾರು ನಾಲ್ಕೂವರೆ ವರ್ಷಗಳ ಹಿಂದೆ ಅದರ ನಿರ್ಮಾತೃ ಹೆಸರಿನಲ್ಲಿಯೇ ನಿರ್ಮಾಣವಾಗಿ ಇಂದಿಗೂ



ಥಾಯ್ಲೆಂಡಿನ ಪ್ರವಾಸಿ ತಾಣಗಳ ಪಟ್ಟಿಯಲ್ಲಿನ ಆಕರ್ಷಣೆ ಎಂದರೆ ಅತಿಶಯೋಕ್ತಿಯಲ್ಲ. ಇದರ ವಿನ್ಯಾಸ ಕಂಡಾಗ ಅನಿಸಿದ್ದು ‘ಸಸ್ಯಾಲಯವೀ ನಾಂಗ್ ನೂಚ್ ಉದ್ಯಾನ’ ಎಂದು.

ಉದ್ಯಾನವನದ ವಿಹಂಗಮ ನೋಟ, ಮಾಹಿತಿ ಉತ್ತಮವಾಗಿದೆ. ಡೈನೊಸಾರ್ ಪ್ರತಿರೂಪ, ಸ್ಟೋನ್ ಹೆಂಜ್‌ನಂತಿರುವ ಶಿಲಾನ್ಯಾಸ ಒಂದಕ್ಕಿಂತ ಒಂದು ಮನಸೆಳೆಯುವಂತಿವೆ. ಪ್ರಾಣಿ ಪಕ್ಷಿಗಳ, ಜೊತೆಗೆ ಸಸ್ಯಸಂಕುಲದ ವೈವಿಧ್ಯಮಯ ನೋಟ, ಊಟಕ್ಕೆ ಉಪಾಹಾರ ಗೃಹ, ಎಲ್ಲದರ ಕುರಿತ ಮಾಹಿತಿ ಓದಿ ಒಮ್ಮೆ ಭೇಟಿ ಮಾಡುವ ಮನಸ್ಸಾಯಿತು.

—ನೆ.ಲ. ರಾಮಮೂರ್ತಿ, ಬೆಂಗಳೂರು

## ಕಾಡಿದ ಪಾಪಪ್ರಜ್ಞೆ



‘ಬೆಡಗಿನ ಕೀಲು ಮುರಿದು’ (ಸೆ. 18, ಸದಾಶಿವ ಸೊರಟೂರು) ಕಥೆಯ ಪ್ರಾರಂಭದಲ್ಲಿ ತಂದೆಯ ಸೇವೆ ಮಾಡುವ ತ್ಯಾಗಮಯಿ ಮಗನ ರೂಪು, ನಂತರ ತನ್ನ ತೊರೆದು ಹೋದ ತಾಯಿಯ ಬಗೆಗಿನ ಕಿಚ್ಚು, ಮಗನ ತುಡಿತ, ಆ ಯುವಕನ ತಾಯಿ ತನ್ನ ಗಂಡನಿಗೆ ಮೋಸ ಮಾಡಿ ಮಗನ ಬಿಟ್ಟು ಹೋದದ್ದರ ಕುರಿತು ಕೋಪ ಬಂದಿತ್ತು. ತದನಂತರ ತಾಯಿಯ ಭೇಟಿಯಾದ ಮಗನಿಗೆ ಸತ್ಯದ ಅರಿವಾದಾಗ ಓದುಗರಾದ ನಮ್ಮಲ್ಲೂ ಒಂಚೂರು ಪಾಪಪ್ರಜ್ಞೆ ಕಾಡಿತು. ಪುರುಷ ಪ್ರಧಾನ ಸಮಾಜ ಕೊನೆಗೂ ಗೆದ್ದಿತು.

—ವಿಜಯ್ ಮಂಜುನಾಥ್, ಬೆಂಗಳೂರು

## ಉತ್ತಮ ನಿರ್ದೇಶನ

ಮನಕಲಕುವ ಕಥೆ. ಮುಗ್ಧ ಮನಸುಗಳು ಹೇಗೆ ಗಾಸಿಗೊಳ್ಳುತ್ತವೆ ಎಂಬುದಕ್ಕೆ ಒಂದು ಉತ್ತಮ ನಿದರ್ಶನ. ಅಂತಿಮ ಸಾಲುಗಳನ್ನು ಓದುವಾಗ ಹೃದಯದಲ್ಲಿ ಒಂದು ರೀತಿಯ ತಳಮಳ ಉಂಟಾಯಿತು.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

## ‘ಚೆನ್ನುಡಿ’ಯ ಸೊಗಸು

‘ಉಳಿದವರು ಕಂಡಂತೆ’ (ಸೆ. 18, ಕುಸುಮಾ ಆಯರಹಳ್ಳಿ) ‘ಚೆನ್ನುಡಿ’ಯಲ್ಲಿ ಚಾಮರಾಜನಗರದ ಗ್ರಾಮ್ಯ ಭಾಷೆಯನ್ನು ದುಡಿಸಿಕೊಂಡ ಬಗೆ ಸೊಗಸಾಗಿದೆ. ಹಾಗೆಯೇ ಸ್ವಾನುಭವದ ಕಥಾ ಹಂದರವೂ ಚೆನ್ನಾಗಿದೆ. ‘ಈ ಕತ ಗಿತ ಬರೆದ ಬುಟ್ಬುಟ್ಟು ಒಂದ್ ಕೂಸ್ ಗೀಸ್ ಎರವ್ವ ಬ್ಯಾಗ್ನೆ’ ಎಂದು ಆಜ್ಞಾಪಿಸಿದ ನಿಂಗವ್ವಜ್ಜಿಯ ಮಾತು ನಮ್ಮ ಸಾಮಾಜಿಕ ಸ್ಥಿತ್ಯಂತರದ ಪ್ರತೀಕವೂ ಹೌದು.

—ಶ್ರೀನಿವಾಸ ರಂಗನ್, ಮೈಸೂರು

## ಹೆಮ್ಮೆಯ ವಿಷಯ

‘ಐರನ್‌ಮ್ಯಾನ್ ಸಂದೀಪ್ ಪಾಟೀಲ್’ (ಸೆ. 18, ರಾಘವೇಂದ್ರ ಕೆ. ತೊಗರ್ಸಿ) ಸ್ಫೂರ್ತಿದಾಯಕವಾಗಿದೆ. ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ್ ‘ಐರನ್‌ಮ್ಯಾನ್ 2025’ ಆಗಿರುವುದು ಹೆಮ್ಮೆಯ ವಿಷಯ. ಭಲೇ ಪಾಟೀಲರೇ, ನಮ್ಮ ರಾಜ್ಯದ ಪೊಲೀಸರು ಯಾರಿಗೂ ಕಮ್ಮಿಯಿಲ್ಲ ಎಂದು ಮತ್ತೊಮ್ಮೆ ಸಾಬೀತು ಮಾಡಿದ್ದೀರಿ. ಬೀಚಿ, ವಿಜಯ ಸಾಸನೂರ್, ಡಾ. ಪಿ.ಎಸ್. ರಾಮಾನುಜಮ್, ಬಿ.ಕೆ. ಶಿವರಾಮ್ ಮುಂತಾದ ಬಹುಮುಖ ಪ್ರತಿಭಾನ್ವಿತ ಪೊಲೀಸರನ್ನು ಕಂಡ ನಮ್ಮ ಎದೆ ಮತ್ತೊಮ್ಮೆ ಹಿಗ್ಗುವಂತೆ ಮಾಡಿದಿರಿ.

—ಶೃಂಗೇರಿ ಲೋಕೇಶ್, ಬೆಂಗಳೂರು

## ನೆನಪು ಮರುಕಳಿಸಿತು

‘ತಿರುಗಿ ಮತ್ತೆ ಜನರ ನಡುವೆ ಸಮುದಾಯ’ (ಸೆ. 18, ಜಿ.ಎನ್. ಮೋಹನ್) ಓದಿ ಹಳೆಯ ನೆನಪುಗಳೆಲ್ಲ ಉಕ್ಕಿಬಂದವು. 1979ರಲ್ಲಿ ರಾಜ್ಯ ಸಮುದಾಯದ ಎರಡು ತಂಡಗಳು ರಾಜ್ಯವನ್ನೇ ಸುತ್ತಿ ಬೆಂಗಳೂರಲ್ಲಿ ಸಮಾರೋಪಗೊಂಡವು. ಈ ಜಾಥಾ ಬೀದಿ ನಾಟಕವನ್ನಷ್ಟೆ ಪ್ರದರ್ಶಿಸಲಿಲ್ಲ. ವೈಚಾರಿಕ ಪುಸ್ತಕಗಳ ಮಾರಾಟವನ್ನು ಸಹ ಹಮ್ಮಿಕೊಂಡಿತ್ತು. ನಮ್ಮ ರಾಜ್ಯದಲ್ಲಿ ನಾಟಕಗಳು ಜನಸಾಮಾನ್ಯರಲ್ಲಿ ಪ್ರಖರ ರಾಜಕೀಯ ಪ್ರಜ್ಞೆ ಬೆಳೆಸಿದರೆ, ಪುಸ್ತಕಗಳಿಂದ ವೈಚಾರಿಕತೆ ಬೆಳೆಯಿತು. ಇದು ನಮ್ಮ ರಾಜ್ಯದ ಒಂದು ಸಾಂಸ್ಕೃತಿಕ ಘಟನೆ ಎಂದೇ ಅನ್ನಿಸುತ್ತದೆ.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ




## ಫಿಟ್‌ನೆಸ್‌ನ ಹೊಸ ಆಯಾಮ

‘ಜಂಬ ಬಿಡಿ ಜುಂಬಾ ಮಾಡಿ’ (ಸೆ. 18, ಉಮಾ ಅನಂತ್) ಲೇಖನ, ಫಿಟ್‌ನೆಸ್‌ನ ಹೊಸ ಸಾಧ್ಯತೆಯನ್ನು ಅನ್ವೇಷಿಸಿದೆ. ಈ ಆಧುನಿಕ ಯುಗದಲ್ಲಿ, ಜೀವನಶೈಲಿಯಲ್ಲಿಯೂ ಹಲವು ಬದಲಾವಣೆಯಾಗಿರುವಾಗ, ಅದಕ್ಕೆ ತಕ್ಕಂತೆ ನಮ್ಮ ದೇಹದ, ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತಿ ಅವಶ್ಯಕವಾಗಿದೆ. ಆರೋಗ್ಯಕ್ಕೆ ಮೂಲವಾಗಿರುವ ಫಿಟ್‌ನೆಸ್‌ಗೆ ‘ಜುಂಬಾ’ ಹೊಸ ಆಯಾಮದ ವ್ಯಾಯಾಮ ಎನಿಸಿತು. ಜುಂಬಾ, ಏರೋಬಿಕ್ಸ್, ಪಿಲಾಟೆಸ್‌ನಂತಹ ವ್ಯಾಯಾಮಗಳ ವಿವರಣೆ ಹಾಗೂ ಅದರ ಪ್ರಯೋಜನಗಳ ಮಾಹಿತಿ ಉಪಯುಕ್ತವಾಗಿವೆ.

—ಧರ್ಮೇಶ್, ಮೈಸೂರು

## ಮನರಂಜನಾತ್ಮಕ ವಿಧಾನ

‘ಜುಂಬಾ’, ಫಿಟ್‌ನೆಸ್ ಕಾಯ್ದುಕೊಳ್ಳಲು ಅತಿ ಸರಳ ಹಾಗೂ ಮನರಂಜನಾತ್ಮಕ ವಿಧಾನ ಎಂದೆನಿಸಿತು. ಯುವಮನಸ್ಸನ್ನು ಸೆಳೆಯುವ ನೃತ್ಯದಂಥ ವ್ಯಾಯಾಮದ ಬಗೆಯಿಂದಾಗುವ ಪ್ರಯೋಜನಗಳ ಕುರಿತು ತಿಳಿದು ಅಚ್ಚರಿಯಾಯಿತು.

—ಸುಷ್ಮಾ, ಬೆಂಗಳೂರು

## ಖುಷಿ ನೀಡಿದ ಹಕ್ಕಿಗಳು

‘ಮನೆ ಅಂಗಳದಲ್ಲಿ ಮನಸೆಳೆಯುವ ಹಕ್ಕಿಗಳು’ (ಸೆ. 18, ಧರ್ಮಾನಂದ ಶಿರ್ವ) ಚೆನ್ನಾಗಿದೆ. ಇಂದು ಕಾಗೆ ಗುಬ್ಬಿಗಳನ್ನು ನೋಡುವುದೇ ಅಪರೂಪದ ಸಂಗತಿಯಾಗಿರುವಾಗ ಬೆಂಗಳೂರಿನ ಮಂಜುನಾಥ ಪ್ರಭು ಅವರ ಮನೆ ಅಂಗಳದಲ್ಲಿ ವಿವಿಧ ಹಕ್ಕಿಗಳನ್ನು ನೋಡಿದ್ದು ಖುಷಿ ನೀಡಿತು.

—ಮಹಾಂತೇಶ ಪಾಟೀಲ, ಹುನಗುಂದ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in